## ಭಾಗ–1
## (PART – I)

## ಭಾರತೀಯ ಕರಾರು ಅಧಿನಿಯಮ, 1872
## (THE INDIAN CONTRACT ACT, 1872)

# ಸಿದ್ಧಾಂತ
## (THEORY)



# ಕರಾರು–1
# (CONTRACT – I)

## ಭಾಗ–1
## (PART – I)

## ಭಾರತೀಯ ಕರಾರು ಅಧಿನಿಯಮ, 1872
## (THE INDIAN CONTRACT ACT, 1872)

## 1. ಕರಾರಿನ ಗುಣಲಕ್ಷಣಗಳು
## (ಸೆಕ್ಷನ್ 10)
## (1. CHARACTERISTICS OF A CONTRACT)
## (Sec. 10)

### ವಿಶ್ವವಿದ್ಯಾನಿಲಯದ ಪ್ರಶ್ನೆಗಳು
### (UNIVERSITY QUESTIONS)

1. "ಎಲ್ಲಾ ಒಪ್ಪಂದಗಳೂ ಕರಾರುಗಳಲ್ಲ, ಆದರೆ ಎಲ್ಲಾ ಕರಾರುಗಳೂ ಒಪ್ಪಂದಗಳಾಗಿರುತ್ತವೆ" – ವ್ಯಾಖ್ಯಾನಿಸಿ.

2. "ಕಾನೂನು ಮೂಲಕ ಜಾರಿಗೊಳಿಸಬಹುದಾದ ಒಪ್ಪಂದವು ಒಂದು ಕರಾರಾಗಿರುತ್ತದೆ" – ಸಿಂಧುವಾದ ಕರಾರಿನ ಅಗತ್ಯತೆಗಳನ್ನು/ ಮೂಲತತ್ವಗಳನ್ನು ಸ್ಪಷ್ಟಪಡಿಸುತ್ತಾ, ಅರ್ಥವ್ಯಾಪ್ತಿಯನ್ನು ಚರ್ಚಿಸಿ.

3. ಕರಾರು ಎಂಬುದರ ಅರ್ಥವೇನು ಎಂಬುದನ್ನು ವಿವರಿಸಿ ಮತ್ತು ಭಾರತೀಯ ಕರಾರು ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವಂತೆ ಸಿಂಧುವಾದ ಕರಾರಿನ ಮೂಲತತ್ವಗಳನ್ನು ವಿವರಿಸಿ.

## ಉತ್ತರ
**(ANSWER)**

## ಅ. ಅರ್ಥವ್ಯಾಪ್ತಿ
**(DEFINITION)**

ಭಾರತೀಯ ಕರಾರು ಅಧಿನಿಯಮದ ಕಲಂ2(ಎಚ್) ಕರಾರನ್ನು ಕಾನೂನಿನ ಅಡಿಯಲ್ಲಿ ಜಾರಿಗೊಳಿಸಬಹುದಾದ ಒಂದು ಒಪ್ಪಂದ ಎಂಬುದಾಗಿ ಅರ್ಥೈಸಿರುತ್ತದೆ.

ಸರ್ ಸಲ್ಮಂಡ್ ಒಂದು ಕರಾರನ್ನು 'ಪಕ್ಷಗಾರರ ನಡುವೆ ಹೊಣೆಗಾರಿಕೆಗಳನ್ನು ರಚಿಸುವ ಮತ್ತು ಅರ್ಥೈಸುವ ಒಂದು ಒಪ್ಪಂದ' ಎಂದು ಅರ್ಥೈಸಿರುತ್ತಾರೆ.

ಉದಾ:–'ಎ' ತನ್ನ ಕಾರನ್ನು ಒಂದು ನಿಶ್ಚಿತ ದಿನಾಂಕದಂದು 'ಬಿ' ಗೆ ರೂ.1,00,000/– ಕ್ಕೆ ಮಾರಾಟ ಮಾಡಲು ಕರಾರು ಮಾಡಿಕೊಂಡಿರುತ್ತಾನೆ ಮತ್ತು 'ಎ' ಸಕಾರಣವಿಲ್ಲದೆ ಸದರಿ ದಿನಾಂಕದಂದು ತನ್ನ ಕಾರನ್ನು ಮಾರಾಟ ಮಾಡಲು ನಿರಾಕರಿಸಿದಲ್ಲಿ, ಆಗ 'ಬಿ' ಕರಾರನ್ನು ನ್ಯಾಯಾಲಯದ ಮೂಲಕ ಜಾರಿಗೊಳಿಸಬಹುದು.

## ಬ. ಒಪ್ಪಂದ
**(AGREEMENT)**

1. ಒಂದು ಪ್ರಸ್ತಾವನೆ (ಕೊಡುಗೆ) ಯನ್ನು ಸ್ವೀಕರಿಸುವವರು ಒಪ್ಪಿಕೊಂಡರೆ, ಆಗ ಅದು ಪ್ರಸ್ತಾಪಿಸುವವರ (ಕೊಡುವವರ) ವಾಗ್ದಾನವಾಗುತ್ತದೆ.

2. ಕಲಂ 2(ಇ) ಒಪ್ಪಂದವನ್ನು ಈ ರೀತಿ ಅರ್ಥೈಸುತ್ತದೆ – 'ಪರಸ್ಪರ ಪರಿಗಣನೆ ಉಂಟುಮಾಡುವಂತಹ ಪ್ರತಿಯೊಂದು ವಾಗ್ದಾನ ಅಥವಾ ವಾಗ್ದಾನಗಳ ಸಮೂಹವು, ಒಂದು ಒಪ್ಪಂದ'.



3. ಒಪ್ಪಂದ ಮತ್ತು ಕರಾರಿನ ನಿಯಮಗಳು ಈ ಕೆಳಕಂಡಂತಿವೆ:

ಒಪ್ಪಂದ = ಕೊಡಲು ಒಪ್ಪಿದುದು + ಅಂಗೀಕಾರ

ಕರಾರು = ಒಪ್ಪಂದ + ಕಾನೂನುಬದ್ಧ ಜಾರಿಯೋಗ್ಯತೆ

ಆದ್ದರಿಂದ, ಎಲ್ಲಾ ಒಪ್ಪಂದಗಳೂ ಕರಾರುಗಳಲ್ಲ ಆದರೆ ಎಲ್ಲಾ ಕರಾರುಗಳೂ ಒಪ್ಪಂದಗಳಾಗಿರುತ್ತವೆ.

ಕರಾರುಗಳ ಕಾಯ್ದೆಯು ಒಪ್ಪಂದಗಳ ಅಖಂಡ ಕಾನೂನು ಆಗಿರುವುದಿಲ್ಲ ಕರ್ತವ್ಯಗಳ ಅಖಂಡ ಕಾನೂನು ಸಹ ಆಗಿರುವುದಿಲ್ಲ.

ಕಾನೂನುಬದ್ಧ ಕರ್ತವ್ಯಗಳನ್ನು ಹುಟ್ಟುಹಾಕದ ಹಲವಾರು ಒಪ್ಪಂದಗಳಿವೆ. ಹಾಗಾಗಿ, ಅವುಗಳು, ಕರಾರುಗಳಲ್ಲ. ಅದೇ ರೀತಿ, ಕೆಲವು ಕರ್ತವ್ಯಗಳಿವೆ, ಅವು ಒಪ್ಪಂದದಿಂದಲೇ ಹುಟ್ಟಿಕೊಂಡಿರಬೇಕೆಂದೇನಿಲ್ಲ, ಉದಾ:–

(1) ಕರ್ತವ್ಯಲೋಪ ಅಥವಾ ನಾಗರಿಕ/ಲೋಕ ವ್ಯವಹಾರದ ತಪ್ಪುಗಳು,

(2) ಅರೆ–ಕರಾರುಗಳು,

(3) ನ್ಯಾಯಾಲಯಗಳ ತೀರ್ಪುಗಳು. ಈ ಹೊಣೆಗಾರಿಕೆಗಳು ಕರಾರು ಸ್ವರೂಪದ್ದಾಗಿರುವುದಿಲ್ಲ. ಆದರೆ, ಆಗಲೂ ಸಹ, ಅವು ಜಾರಿಯೋಗ್ಯವಾಗಿವೆ.

................ **'ಒಪ್ಪಂದಗಳ ಅಖಂಡ ಕಾನೂನು ಆಗಿರುವುದಿಲ್ಲ, ಕರ್ತವ್ಯಗಳ ಅಖಂಡ ಕಾನೂನು ಸಹ ಆಗಿರುವುದಿಲ್ಲ. ಅದು ಕರ್ತವ್ಯಗಳನ್ನು ಸೃಜಿಸುವಂತಹ ಒಪ್ಪಂದಗಳು ಮತ್ತು ಒಪ್ಪಂದಗಳಲ್ಲಿ ತಮ್ಮ ಮೂಲಗಳನ್ನು ಹೊಂದಿರುವಂತಹ ಕರ್ತವ್ಯಗಳ ಕಾನೂನು.' ಎಂದು ಸರಿಯಾಗಿಯೇ ಗಮನಿಸಿದ್ದಾರೆ**. ಅದು ಕರಾರಿನ ಸ್ವರೂಪದಲ್ಲಿರದ ಎಲ್ಲಾ ಕರ್ತವ್ಯಗಳು ಮತ್ತು ಸಾಮಾಜಿಕ ಸ್ವರೂಪದಲ್ಲಿರುವ ಎಲ್ಲಾ ಒಪ್ಪಂದಗಳನ್ನು ಒಳಗೊಂಡಿದೆ.

## ಸಿ. ಸಿಂಧುವಾದ ಕರಾರಿನ ಗುಣಲಕ್ಷಣಗಳು : (ಕಲಂ 10)

**(CHARACTERISTICS OF A VALID CONTRACT)**

**(Sec. 10)**

ಕಲಂ 10 ರನ್ವಯ, ಒಪ್ಪಂದಗಳನ್ನು ಕರಾರಿಗೆ ಸಂಬಂಧಪಟ್ಟ ಪಕ್ಷಗಾರರ ಮುಕ್ತ ಒಪ್ಪಿಗೆಯಿಂದ, ಕಾನೂನುಬದ್ಧ ಪರಿಗಣನೆಗಾಗಿ ಮತ್ತು ಕಾನೂನುಬದ್ಧ ಧ್ಯೇಯದೊಂದಿಗೆ ಮಾಡಿದ್ದರೆ ಮತ್ತು ಅವುಗಳನ್ನು ಕಾನೂನು ಅಡಿಯಲ್ಲಿ ಅಸಿಂಧು ಎಂದು ವಿಧ್ಯುಕ್ತವಾಗಿ ಘೋಷಿಸಿರದಿದ್ದರೆ, ಅಂತಹ ಎಲ್ಲಾ ಒಪ್ಪಂದಗಳೂ ಕರಾರುಗಳಾಗಿರುತ್ತವೆ.

ಒಂದು ಒಪ್ಪಂದವು ಕರಾರು ಆಗಬೇಕಾದಲ್ಲಿ ಈ ಕೆಳಕಂಡ ಆರು ಮೂಲ ತತ್ವಗಳನ್ನು ಹೊಂದಿರಬೇಕು:

### 1. ಮುಕ್ತ ಸಮ್ಮತಿ
### (FREE CONSENT)

ಒಂದು ಕರಾರು ರಚಿಸಬೇಕಾದರೆ, ಪಕ್ಷಗಾರರು ತಮ್ಮ ಮುಕ್ತ ಸಮ್ಮತಿಯನ್ನು ನೀಡಿರಬೇಕು. ಸಮ್ಮತಿಯ ಗೈರುಹಾಜರಿಯಲ್ಲಿ, ಒಪ್ಪಂದವು ಅಸಿಂಧು ಅಥವಾ ಅಸಿಂಧುಯೋಗ್ಯವಾಗುತ್ತದೆ. ಮುಕ್ತ ಸಮ್ಮತಿಯು ತಪ್ಪಿನಿಂದ, ಬಲಪ್ರಯೋಗದಿಂದ, ಪ್ರಭಾವದಿಂದ, ವಂಚನೆ, ತಪ್ಪು ಪ್ರತಿಪಾದನೆ, ಇತ್ಯಾದಿಗಳಿಂದ ಕಳಂಕಿತವಾಗಿರುತ್ತದೆ. ಉದಾ:– 'ಎ' ನನ್ನು ಪಿಸ್ತೂಲು ತೋರಿಸಿ ಒಂದು ವಾಗ್ದಾನ ಪತ್ರಕ್ಕೆ ಸಹಿ ಹಾಕುವಂತೆ ಬಲವಂತ ಮಾಡಲಾಗಿದೆ. ಇಲ್ಲಿ 'ಎ'ನ ಸಮ್ಮತಿಯು ಮುಕ್ತವಾದುದಲ್ಲ. ಆದ್ದರಿಂದ ಇದು ಅಸಿಂಧುವಾದ ಕರಾರಾಗುತ್ತದೆ.

### 2. ಕರಾರಿಗೆ ಅರ್ಹತೆ /ಪಕ್ಷಗಾರರ ಸಾಮರ್ಥ್ಯ
### (COMPETENCY TO CONTRACT/CAPACITY OF PARTIES)

'ಕರಾರಿಗೆ ಅರ್ಹತೆ/ಪಕ್ಷಗಾರರ ಸಾಮರ್ಥ್ಯ' ಎಂಬ ಪದಪುಂಜವು, ಕಾನೂನು ಒಬ್ಬ ವ್ಯಕ್ತಿಯನ್ನು ಆರ್ಥಿಕವಾಗಿ ದಿವಾಳಿ ಎಂದು ಘೋಷಿಸದ



ಹೊರತು, ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಕ್ಕೆ ಸಂಬಂಧಿಸಿರುತ್ತದೆ ಮತ್ತು ಆರ್ಥಿಕ ಸಾಮರ್ಥ್ಯಕ್ಕಲ್ಲ. ಅಪ್ರಾಪ್ತ ವಯಸ್ಸಿನವನು, ಹುಚ್ಚ, ಮೂರ್ಖ, ಮದ್ಯಪಾನ ಮಾಡಿದ ವ್ಯಕ್ತಿಗಳು ಮತ್ತು ದಿವಾಳಿ ಇತ್ಯಾದಿ ಕಾನೂನು ಅಡಿಯಲ್ಲಿ ಅಸಮರ್ಥರಾದಂತಹ ಯಾವುದೇ ವ್ಯಕ್ತಿಗಳು, ತಮ್ಮ ಯೋಗ್ಯತೆ ಇಲ್ಲದಿರುವ ಕಾರಣದಿಂದ ಸಿಂಧುವಾದ ಕರಾರು ಮಾಡಿಕೊಳ್ಳಲು ಅರ್ಹರಾಗಿರುವುದಿಲ್ಲ.

### ಮೊಹಿರಿಬೀಬಿ ವಿರುದ್ಧ ಧರ್ಮೋದಾಸ್ ಘೋಷ್
### *(Mohiribibi Vs. Dharmodas Ghosh)*

ಒಬ್ಬ ಅಪ್ರಾಪ್ತ ವಯಸ್ಸಿನವನು ರೂ.20,030/– ಗಳಿಗೆ ಆಧಾರ ಮಾಡಿದರು. ಸಾಲ ಕೊಡುವವನು ಆಧಾರದ ಭದ್ರತೆಯ ಮೇಲೆ ರೂ.8,000/– ಪಾವತಿಸಿದನು. ಅಪ್ರಾಪ್ತ ವಯಸ್ಸಿನ ವ್ಯಕ್ತಿಯು ಅಪ್ರಾಪ್ತನು ಮಾಡಿಕೊಳ್ಳುವ ಕರಾರು ಅಸಿಂಧುವೆಂದು ಆಧಾರವನ್ನು ರದ್ದುಪಡಿಸಲು ಕೋರಿ ದಾವೆ ಹೂಡಿದನು. ನ್ಯಾಯಾಲಯವು ಅಪ್ರಾಪ್ತನು ಮಾಡಿಕೊಳ್ಳುವ ಕರಾರು ಮೂಲದಲ್ಲೇ ಅಸಿಂಧುವಾಗಿದ್ದ ಸಾಲ ಕೊಟ್ಟವನು ತಾನು ಕೊಟ್ಟಿರುವ ಸಾಲದ ಮೊತ್ತವನ್ನು ಅಪ್ರಾಪ್ತ ವಯಸ್ಸಿನವನಿಂದ ವಸೂಲಿ ಮಾಡಲು ಸಾಧ್ಯವಿಲ್ಲ ಎಂಬ ನಿರ್ಣಯಕ್ಕೆ ಬಂದಿತು.

### 3. ಕಾನೂನುಬದ್ಧ ಪ್ರತಿಫಲ
### (LAWFUL CONSIDERATION)

ಪ್ರತಿಯೊಂದು ಕರಾರಿಗೂ ಆರ್ಥಿಕ ಪ್ರತಿಫಲದ ಬೆಂಬಲವಿರಬೇಕು. ಪ್ರತಿಫಲ ಎಂದರೆ 'ಪ್ರತಿಯಾಗಿ ಏನಾದರೂ ನೀಡುವುದು' ಎಂದರ್ಥ. ಪ್ರತಿಫಲದ ಅಸ್ತಿತ್ವತೆಗಾಗಿ ಕರಾರಿನ ಉಭಯ ಪಕ್ಷಗಾರರು ಸ್ವಲ್ಪ ಲಾಭ ಮತ್ತು ಸ್ವಲ್ಪ ನಷ್ಟ ಹೊಂದಿರಲೇಬೇಕು. ಒಂದು ಪಕ್ಷಗಾರನು ಯಾವಾಗಲೂ ಲಾಭ ಪಡೆಯುತ್ತಿದ್ದು ಮತ್ತೊಬ್ಬ ಪಕ್ಷಗಾರ ಯಾವಾಗಲೂ ನಷ್ಟ ಹೊಂದುತ್ತಿದ್ದರೆ, ಆಗ ಅಲ್ಲಿ ಪ್ರತಿಫಲ ಇರುವುದಿಲ್ಲ. ಉದಾ:– 'ಡಿ'ಯನ್ನು 'ಬಿ' ಕೊಲೆ ಮಾಡುವುದರ ಪ್ರತಿಫಲವಾಗಿ 'ಬಿ'ಗೆ ರೂ.20,000/– ಗಳನ್ನು ಪಾವತಿಸುವುದಾಗಿ 'ಎ' ವಾಗ್ದಾನ ಮಾಡುತ್ತಾನೆ. ಈ ಪ್ರತಿಫಲವು ಕಾನೂನುಬಾಹಿರ.

## 4. ಕಾನೂನುಬದ್ಧ ಧ್ಯೇಯ
## (LAWFUL OBJECT)

ಒಪ್ಪಂದದ ಧ್ಯೇಯವು ಕಾನೂನುಬದ್ಧವಾಗಿರಬೇಕು. ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಅದು ಅಕ್ರಮವಾದ, ದುರ್ಮಾರ್ಗದ ಅಥವಾ ಸಾರ್ವಜನಿಕ ನೀತಿಗೆ ವಿರುದ್ಧವಾದುದಾಗಿರಬಾರದು.

### ಪರ್ಸ್ ವಿರುದ್ಧ ಬ್ರೂಕ್ಸ್
### *(Pearce Vs. Brookes)*

ಗಾಡಿ ನಿರ್ಮಾಣಗಾರರ ಒಂದು ಸಂಸ್ಥೆಯು ಒಂದು ಬಂಡಿಯನ್ನು ಒಬ್ಬ ವೇಶ್ಯೆಗೆ, ಅದನ್ನು ಆಕೆ ಪುರುಷರನ್ನು ಆಕರ್ಷಿಸಲು ಉಪಯೋಗಿಸುತ್ತಿದ್ದಳೆಂದು ಗೊತ್ತಿದ್ದೂ ಬಾಡಿಗೆಗೆ ನೀಡಿತು. ವೇಶ್ಯೆ ಬಾಡಿಗೆ ಪಾವತಿಸಲು ವಿಫಲಳಾದಳು. ನ್ಯಾಯಾಲಯವು ಒಪ್ಪಂದವನ್ನು ಅಕ್ರಮ ಉದ್ದೇಶಕ್ಕಾಗಿ ಮಾಡಿಕೊಂಡಿರುವುದರಿಂದ, ಗಾಡಿ ನಿರ್ಮಾಣಗಾರರು ಬಾಡಿಗೆಯನ್ನು ವಸೂಲಿ ಮಾಡಲು ಸಾಧ್ಯವಿಲ್ಲ ಎಂದು ನಿರ್ಣಯಿಸಿತು.

## 5. ಅಸಿಂಧು ಎಂದು ಘೋಷಿಸದ ಒಪ್ಪಂದ
## (AGREEMENT NOT DECLARED VOID)

ಒಪ್ಪಂದವನ್ನು ನಮ್ಮ ದೇಶದ ಯಾವುದೇ ಕಾನೂನು ವಿದ್ಯುಕ್ತವಾಗಿ ಅಸಿಂಧು ಎಂದು ಘೋಷಿಸಬಾರದಿತ್ತು. ಉದಾ:–

ಪಣವೊಡ್ಡುವ ಕರಾರು, ವ್ಯಾಪಾರವನ್ನು ನಿಗ್ರಹಿಸುವಂತಹ ಒಪ್ಪಂದ ಇತ್ಯಾದಿಗಳನ್ನು ಭಾರತೀಯ ಕರಾರು ಅಧಿನಿಯಮದ ಪ್ರಕಾರ ಅಸಿಂಧು ಎಂದು ಘೋಷಿಸಲಾಗಿದೆ. ಅಸಿಂಧು ಎಂದು ಘೋಷಿಸಿರದಂತಹ ಕರಾರುಗಳು ಮಾತ್ರವೇ ಸಿಂಧುವಾದ ಕರಾರುಗಳಾಗಿದ್ದು, ಅವುಗಳು ನ್ಯಾಯಾಲಯದಲ್ಲಿ ಜಾರಿಯೋಗ್ಯವಾಗಿವೆ.



## 6. ಮನಸ್ಸಿನ ಅನನ್ಯತೆ
## [CONSENSUS AD-IDEM: (IDENTITY OF MIND)]

ಪಕ್ಷಗಾರರು ಒಂದೇ ರೀತಿಯಲ್ಲಿ ಆಲೋಚಿಸಿ ಮತ್ತು ಗ್ರಹಿಸಿ ವಸ್ತುವಿಷಯದ ಬಗ್ಗೆ ತಮ್ಮ ಒಪ್ಪಿಗೆ ನೀಡಿರುತ್ತಾರೆ.

ಉದಾಹರಣೆಗೆ, 'ಎ' ಬಳಿ ಎರಡು ಕಾರುಗಳಿವೆ – ಒಂದು ಸ್ಯಾಂಟ್ರೊ ಮತ್ತು ಇನ್ನೊಂದು ಮಾರುತಿ. 'ಎ' ತನ್ನ ಸ್ಯಾಂಟ್ರೊ ಕಾರನ್ನು 'ಬಿ' ಗೆ ಮಾರಾಟ ಮಾಡುವುದಾಗಿ ಹೇಳಿದ, ಆದರೆ 'ಬಿ', 'ಎ' ಬಳಿ ಮಾರುತಿ ಕಾರು ಮಾತ್ರವೇ ಇದೆ ಎಂದು ನಂಬಿ, ಕಾರನ್ನು ಖರೀದಿಸಲು ಒಪ್ಪಿಕೊಂಡ. ಇಲ್ಲಿ ಇಬ್ಬರು ಪಕ್ಷಗಾರರು ಬೇರೆ ಬೇರೆ ವಿಷಯದ ಬಗ್ಗೆ ಯೋಚಿಸುತ್ತಿದ್ದಾರೆ. ಆದ್ದರಿಂದ ಅವರಿಬ್ಬರ ಆಲೋಚನೆಯಲ್ಲಿ ಅನನ್ಯತೆ ಇಲ್ಲದ ಕಾರಣ ಕರಾರು ಅಸಿಂಧುವಾಗಿದೆ.

ಮೇಲ್ಕಂಡ ಎಲ್ಲಾ ಆರು ಅಗತ್ಯತೆಗಳನ್ನೂ ತೃಪ್ತಿಕರವಾಗಿ ಈಡೇರಿಸಿದ್ದರೆ, ಒಂದು ಒಪ್ಪಂದವು ಕರಾರು ಆಗುತ್ತದೆ ಮತ್ತು ಅದು ಕಾನೂನಿನ ಅಡಿಯಲ್ಲಿ ಜಾರಿಯೋಗ್ಯವಾಗಿದೆ. ಹಾಗಾಗಿ, 'ಎಲ್ಲಾ ಒಪ್ಪಂದಗಳೂ ಕರಾರುಗಳಲ್ಲ, ಆದರೆ ಎಲ್ಲಾ ಕರಾರುಗಳು ಒಪ್ಪಂದಗಳು' ಎಂಬ ಉಧೃತ ವಾಕ್ಯವು ಸರಿಯಾಗಿದೆ.